ಶ್ರೀ ಎನ್. ಎರ್. ಬೆಲ್ಲದ್.—ಅಲ್ಲಿಗೆ ಕುಡಿಯುವ ನೀರಿನ ಬಾವಿಯನ್ನೊದಗಿಸಬೇಕೆಂದು ಹಿಂದೆ ಸದಸ್ಯರಾಗಿದ್ದ ಎಲ್ಲವ್ವ ಸಾಂಬ್ರಾಣಿಯವರು ಕೇಳಿದ್ದರು, ಇನ್ನೂ ಒದಗಿಸಿಲ್ಲ. ಈಗರಾದರೂ ಅದನ್ನು ಮಂಜೂರು ಮಾಡುತ್ತೀರಾ? ಆ ಬಗ್ಗೆ ಪ್ಲಾನು, ಅಂದಾಜು ವಗೈರೆ ಆಗಿರುವ ವಿವರ ಹೇಳುತ್ತೀರಾ?

†ಶ್ರೀ ಪಿ. ಎಂ. ನಾಡಗೌಡ.—ಸರಕಾರದವರು 1964ರೊಳಗೆ ರಾಣಿಬೆನ್ನೂರು ತಾಲ್ಲೂಕಾ ದೊಳಗೆ ಜನರಿಗೆ ಅದಷ್ಟೂ ನೀರಿನ ಸೌಕರ್ಯ ಒದಗಿಸಿಕೊಡಬೇಕೆಂದು ಸೆಂಟರಿನಿಂದ ಸಹಾಯ ವನ್ನೂ ಪಡೆದು ರಾಜ್ಯ ಸರಕಾರದವರು ಅದಷ್ಟು ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಅದಷ್ಟೂ ಶೀಘ್ರವಾಗಿ ಪೂರ್ತಿಯಾಗಿ ಒದಗಿಸಿಕೊಡುತ್ತೇವೆ.

Providing of drinking water to Kundagol

*Q.—152 Sri S. R. BOMMAI (Kundagol).—

Will the Minister for Development and Co-operation be pleased to state :—

(*a*) whether the Government has taken up any work in the current year for providing drinking water to villages in Kundagol Taluk ;

(*b*) if so, in which of the villages ?

*A.—Sri P. M. NADGOUDA (Minister for Development and Co-operation).—

(*a*) and (*b*) During 1966-67, works were taken up in the following villages :—

1. Chakalabbi.
2. Malali.
3. Mattigatti.

ಶ್ರೀ ಎಸ್. ಆರ್. ಬೊಮ್ಮೈ.—ಉತ್ತರದಲ್ಲಿ ಹೇಳಿರುವಂತೆ ಮೂರು ಊರುಗಳಲ್ಲಿ ನೀರಿನ ಯೋಜನೆಗಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಇದು ಯಾವ ಸ್ಕೀಮಿನಲ್ಲಿದೆ?

†ಶ್ರೀ ಪಿ. ಎಂ. ನಾಡಗೌಡ.—ಒಟ್ಟಾಗಿ ಕುಂದಗೋಳ ತಾಲ್ಲೂಕಿನಲ್ಲಿ ಸರಕಾರ 4,763 ಬಾವಿ ಗಳನ್ನು ಮಾಡಬೇಕೆಂದು ಕುಂದಗೋಳ ತಾಲ್ಲೂಕಾ ಡೆವಲಪ್‌ಮೆಂಟು ಬೋರ್ಡಿಗೆ ತಿಳಿಸಿದೆ. ಇಲ್ಲಿ ಹೇಳಿರುವ ಮೂರು ಊರುಗಳಿಗಾಗಿ ಅಂದಾಜು ತಯಾರಾಗಿರುವುದು ಒಂದರಲ್ಲಿ 11.669, ಇನ್ನೊಂದರಲ್ಲಿ 14 ಸಾವಿರ, 11 ಸಾವಿರ ಹಾಗೂ 12 ಸಾವಿರದ ಅಂದಾಜುಗಳು ತೆಗೆದುಕೊಳ್ಳ ಬಹುದು ಎಂದು ಕುಂದಗೋಳ ತಾಲ್ಲೂಕಾ ಬೋರ್ಡಿಗೆ ತಿಳಿಸಿದೆ.

ಶ್ರೀ ಎಸ್. ಆರ್. ಬೊಮ್ಮೈ.—ಕುಂದಗೋಳ ತಾಲ್ಲೂಕಿನಲ್ಲಿರುವ ಜನ ವರ್ಷದಲ್ಲಿ ನುಮಾರು ನಾಲ್ಕು ತಿಂಗಳ ಕಾಲ ಆರು ಮೈಲಿಯಾಚೆ ಹೋಗಿ ನೀರು ತರುತ್ತಿದ್ದಾರೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಪಿ. ಎಂ. ನಾಡಗೌಡ.—ಇದೂ ಸರಕಾರದ ಗಮನಕ್ಕೆ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮೈ.—ಇದರ ಬಗ್ಗೆ ಏನಾದರೂ ಯೋಜನೆ ಕೈಗೊಂಡಿದ್ದೀರಾ?

ಶ್ರೀ ಪಿ. ಎಂ. ನಾಡಗೌಡ.—ಸರಕಾರದವರು ಆಗಲೇ ಹೇಳಿದಂತೆ ನಾಲ್ಕು ಊರುಗಳ ಯೋಜನೆ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದೆ. ಅದು ಚಾಕಲಬ್ಬಿ, ಮಳಲಿ, ಮತ್ತಿಗಟ್ಟಿ ಹಾಗೂ ಎಲ್ಲಾಪುರ. ಇದರಲ್ಲಿ ಪ್ರಯಾರಿಟಿ ಮೇಲೆ ಕೆಲಸ ತೆಗೆದುಕೊಳ್ಳಬೇಕೆಂದು ಸೂಚನೆ ಕೊಡಲಾಗಿದೆ. ಇದರ ಎಸ್ಟಿಮೇಟುಗಳು ತಯಾರಾಗಿವೆ. ಇದರಲ್ಲಿ ಒಂದರ ಎಸ್ಟಿಮೇಟು 87 ಸಾವಿರ, ಇನ್ನೊಂದು 77 ಸಾವಿರ, ಮೂರನೇದು ಎಂದರೆ ಅಲ್ಲಾಪುರದ್ದು 7,900 ಬಾಗೇವಾಡಾದ್ದು 7,000 ಹೀಗೆ ಮಾಡಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಯೋಜನೆಗಳಲ್ಲಿ ಯಾವುವು ಫೈನಲ್ ಸ್ಟೇಜಿನಲ್ಲಿವೆ ?

ಶ್ರೀ ಪಿ. ಎಂ. ನಾಡಗೌಡ.—ಒಂದನೇ ಹಾಗೂ ಎರಡನೇ ಯೋಜನೆ ಫೈನಲ್ ಸ್ಟೇಜಿನಲ್ಲಿದೆ ಮತ್ತು ಇದಕ್ಕೆ ಅಪ್ರೂವಲ್ ಕೂಡ ಕೊಡಲಾಗಿದೆ. ಇನ್ನುಳಿದವುಗಳ ಅಂದಾಜಾಗಳು ಹೆಲ್ತ್ ಮತ್ತು ಇಂಜಿನೀಯರಿಂಗು ಇಲಾಖೆಗಳಲ್ಲಿ ಅವರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಅವರಿಂದ ಎಂದನಂತರ ಸರಕಾರ ಇದನ್ನೂ ಕೂಡ ಮಂಜೂರು ಮಾಡುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕುಂದಗೋಳ ತಾಲ್ಲೂಕಿನಲ್ಲಿ ಸುಮಾರು 44 ಊರುಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ ಎಂದು ಸರಕಾರಕ್ಕೆ ಅರ್ಜಿ ಕಳುಹಿಸಿರುವುದು ತಮ್ಮ ಗಮನಕ್ಕೆ ಎಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಕುಂದಗೋಳ ತಾಲ್ಲೂಕಿನಲ್ಲಿ ಒಂದು ತರಹದ ವಿಶಿಷ್ಟ ಪರಿಸ್ಥಿತಿ ಇದೆ. ಏಕೆಂದರೆ, ಇಲ್ಲಿ ಬರುವ ನೀರು ಕುಡಿಯಲು ಯೋಗ್ಯವಾದುದಲ್ಲ, ಇದು ಬ್ರೇಕಿಷ್ ಆಗಿದೆ ಎಂದು ಇದಕ್ಕಾಗಿ ನೇಮಿಸಿದ್ದ ಎಕ್ಸ್‌ಪರ್ಟ್ ಕಮಿಟಿಯವರು ಹೇಳಿದ್ದಾರೆ. ಅವರು ಹೇಳಿರುವುದನ್ನೇ ಇಲ್ಲಿ ಸಭೆಯ ಗಮನಕ್ಕೆ ತರುತ್ತೇನೆ. ಅವರ ಎಂದರೆ ಎಕ್ಸ್‌ಪರ್ಟ್ ಒಪ್ಪೀನಿಯನ್ ಕೊಟ್ಟಿದೆ :

> "In this taluk, due to breakish nature of the soil, sinking and constructing new drinking Water Wells was found not feasible. Besides sources of water are not found to be adequate and also fit for drinking purposes. The PWD authorities opined that bore wells may be tried. Accordingly, a test borewell at the village Hiremattu has been taken out of the funds allotted for LBW programme and this work is entrusted to the Executive Engineer, Dharwar, who sunk a bore-well up to a depth of 250 feet has opined that the water is breakish and quite unfit for drinking purpose."

ಇದರಿಂದಾಗಿ ಇಷ್ಟು ಹಣ ಇಲ್ಲಿ ಖರ್ಚು ಮಾಡಿದರೂ ಅದರಿಂದ ಜನಕ್ಕೆ ಅನುಕೂಲವಾಗುತ್ತಿಲ್ಲ ಮತ್ತು ಇದರಿಂದೇನೂ ಪ್ರಯೋಜನವಿಲ್ಲ ಎನ್ನುವುದು ಕಂಡುಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ತಾಲ್ಲೂಕಿನ ಜನರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವ ಯೋಚನೆ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇದನ್ನೂ ವಿಚಾರ ಮಾಡಬೇಕು.

Rural drinking water supply scheme in Chintamani

*Q.—388. Sri T. K. GANGI REDDY (Chintamani).—

Will the Minister for Development and Co-operation be pleased to state :—

(*a*) the number of villages in Chintamani Taluk wherein the work under Rural Drinking Water Supply Scheme has been taken up ;

(*b*) the number of villages in which it is possible to take up the said work this year ;

(*c*) the number of villages in the above taluk that would be supplied with drinking water during the IV Five Year Plan ?

A.—Sri P. M. NADGOUDA (Minister for Development and Co-operation).—

(*a*) One.
(*b*) Two.